# ಆತ್ಮಶ್ರೀಗಾಗಿ...

ಒಂದು ನಾಡಿನಲ್ಲಿರಬೇಕಾದ ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನ ಅವಸಾನವಾದರೆ, ಅದು ಆ ಸಮಾಜದ ಪತನ ಎಂದೇ ಅರ್ಥ. ವಿಚಾರಶೂನ್ಯತೆ ನಮ್ಮ ತರುಣ ವಿದ್ಯಾರ್ಥಿಗಳನ್ನು ಇಂದು ವ್ಯಾಪಕವಾಗಿ ಆವರಿಸಿಕೊಂಡಿದೆ. ಮನುಷ್ಯನ ಸಹಜ ಗುಣಗಳಾಗಿದ್ದ ಜಾತ್ಯತೀತ, ಮಾನವೀಯ ನಡವಳಿಕೆ, ಸಹಿಷ್ಣುತೆ ಇವೆಲ್ಲ ನಮ್ಮ ತರುಣರಲ್ಲಿ ಬತ್ತಿಹೋಗುತ್ತಿರುವುದು ನಮ್ಮ ನಾಗರಿಕ ಸಮಾಜದ ಅವನತಿ ಎಂದೇ ತಿಳಿಯಬೇಕು. ನಮ್ಮ ಪೂರ್ವಿಕರು ನಮಗಾಗಿ ವೈವಿಧ್ಯಮಯವಾದ ಸಮಾಜವೊಂದನ್ನು ನಿರ್ಮಿಸಿಕೊಟ್ಟು ಹೋಗಿದ್ದರು. ಇಂದು ಸ್ವಾತಂತ್ರ್ಯ, ಸಮಾನತೆ ಮತ್ತು ಸಹಿಷ್ಣುತೆಯ ಎಲ್ಲ ಸೌಧಗಳು ಉರುಳುತ್ತಿವೆ. ದ್ವೇಷ, ಹಿಂಸೆಯ ಆಯುಧಗಳು ಎಲ್ಲರ ಎದೆಯನ್ನು ಗಾಯಗೊಳಿಸುತ್ತಿವೆ.

ಬುದ್ಧದೇವ, ಬಸವ, ಕಬೀರ, ತಿರುವಳ್ಳುವರ್, ತುಕಾರಾಮ, ಕನಕದಾಸ, ಕುವೆಂಪು ಮುಂತಾದ ದಾರ್ಶನಿಕರು ಮತ್ತು ಸಂತರು ಕೇವಲ ತಮ್ಮ ಕಾಲದ ವಿದ್ಯಮಾನಗಳಿಗಷ್ಟೇ ಚಿಂತಿಸದೆ, ಭವಿಷ್ಯದಲ್ಲಿ ಸಮಾಜ ಹೇಗಿರಬೇಕೆಂಬುದರ ಬಗ್ಗೆಯೂ ಕನಸು ಕಂಡಿದ್ದರು. ಅವರು ಹೇಳಿದ್ದು ಅಂದಿಗೇ ಮುಗಿದಿಲ್ಲ. ಅದು ಇಂದಿಗೂ, ನಾಳೆಗೂ ಮುಂದುವರಿಯುತ್ತದೆ. ಅವರು ಕಂಡ ಎಲ್ಲ ಕನಸುಗಳನ್ನು ಇಂದು ವಿಚಾರಶೂನ್ಯತೆ ಮತ್ತು ಮೌಢ್ಯತೆಯಿಂದ ದಾರಿತಪ್ಪಿರುವ ಯುವಕರು ತಮ್ಮ ಮೈಗೆ ತಾವೇ ಕೊಳ್ಳಿ ಇಟ್ಟುಕೊಳ್ಳುವಂತೆ ಸಮಾಜದ ನೆಮ್ಮದಿಯನ್ನು ದಹಿಸುತ್ತಿದ್ದಾರೆ. ಎಲ್ಲ ಧರ್ಮಗಳ ಮೂಲಭೂತವಾದ ಉಂಟುಮಾಡುತ್ತಿರುವ ಹಿಂಸೆ ಮತ್ತು ಕ್ರೌರ್ಯ ಹೇಗೆ ನಿರ್ದಯವಾಗಿರುತ್ತದೆ ಎಂಬುದನ್ನು ಸಮಾಜ ಈಗಾಗಲೇ ಅನುಭವಿಸುತ್ತಿದೆ. ಇದೆಲ್ಲಾ ತರುಣರಲ್ಲಿ ಕಾಣೆಯಾಗಿರುವ ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನದ ಅಭಾವದ ಫಲ. ಆದ್ದರಿಂದಲೇ ಕುವೆಂಪು 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂದು ಯುವಕರಿಗೆ ಕರೆ ನೀಡಿದರು. 'ನಿರಂಕುಶಮತಿ' ಎನ್ನುವುದನ್ನು ಕುವೆಂಪು ಹೀಗೆ ವಿವರಿಸಿದ್ದಾರೆ: 'ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೆ ನಿರಂಕುಶಮತಿ'. 'ತಮ್ಮ ಮತ್ತು ಜಗತ್ತಿನ ಶ್ರೇಯಸ್ಸನ್ನು ಕೋರುವ ಯುವಕರೆಲ್ಲರೂ ನಿರಂಕುಶಮತಿಗಳಾಗಬೇಕು' ಎಂದು ಕುವೆಂಪು ಕರೆ ನೀಡಿದರು.

'ಮತಿ ಮನುಷ್ಯರೆಲ್ಲರಲ್ಲಿಯೂ ಇರುತ್ತದೆ. ಆದರೆ ಈಗೇನಾಗಿದೆ ಅದರ ಗತಿ? ಮೌಢ್ಯದಿಂದಲೂ ಮತಾಚಾರಗಳಿಂದಲೂ ಸಮಾಜ ಭೀತಿಯಿಂದಲೂ ರಾಜಭಯದಿಂದಲೂ ಸ್ವರ್ಗ ನರಕ ದೇವಾನುದೇವತೆಗಳ ಮೋಹ ಮಾಯೆಗಳಿಂದಲೂ ಅದು ಸತ್ವರಹಿತವಾಗಿದೆ; ಕಾಂತಿಹೀನವಾಗಿದೆ. ಚಕ್ರವರ್ತಿಯಂತೆ ಸಿಂಹಾಸನದಲ್ಲಿ ಮಂಡಿಸಬೇಕಾದುದು ತೊತ್ತಾಗಿ ಕಾಲೊತ್ತಬೇಕಾಗಿದೆ. ಎಂದರೆ ಮತಿಗೆ ಅಂಕುಶಗಳು ಅತಿಯಾಗಿ ಹೋಗಿ ಜೀವನ ನಿಸ್ತೇಜವಾಗಿದೆ...' ಮುಂದುವರಿದು ಕುವೆಂಪು 'ಸರ್ವಮತಗಳಿಗಿಂತ ಶುದ್ಧ ಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು. ಆ ಗುರು, ಈ ಆಚಾರ್ಯ, ಆ ಧರ್ಮಶಾಸ್ತ್ರ, ಈ ಮನುಸ್ಮೃತಿ ಮೊದಲಾದವು ಏನೇ ಹೇಳಲಿ; ಎಲ್ಲವನ್ನೂ ವಿಮರ್ಶಿಸುವ, ಪರಿಶೀಲಿಸುವ, ಒರೆಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆ. ಈಶ್ವರ ನಮ್ಮಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳು ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ, ಆ ಪ್ರಕಾಶವೆ ಮತಿ' (ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ). ಇದನ್ನು ಮೀರಿದರೆ 'ಮೌಢ್ಯವೇ ಈಶ್ವರ ನಿಂದೆ' ಎಂದು ಹೇಳಿದರು.

ಭಾರತ ಈಗ ತಾನು ನಂಬಿರುವ ಪುರಾಣ ಕಾಲಕ್ಕೆ ಮರಳುತ್ತಿದೆ. ಅದರ ಮುಖ ಮಾತ್ರ ವರ್ತಮಾನದಲ್ಲಿದ್ದರೆ, ಕಣ್ಣುಗಳು ಹಿಂದಿನದನ್ನು ನೋಡುತ್ತಿವೆ. ಹೀಗಿರುವಲ್ಲಿ ನಮ್ಮ ಸಂವಿಧಾನ ನಮಗೆ ನೀಡಿರುವ ವೈಚಾರಿಕ ಶಿಕ್ಷಣ, ಸಾಮಾಜಿಕ ನ್ಯಾಯ, ಸೌಹಾರ್ದ ಬಾಳಿನ ಹಕ್ಕುಗಳು ಮಣ್ಣುಗೂಡುತ್ತಿವೆ. ಆದರ್ಶಗಳು ಇರುವುದು ಆಚರಿಸಲು, ಆರಾಧಿಸಲು ಅಲ್ಲ! ಮಹಮದ್ ಪೈಗಂಬರ್ ಮೆಕ್ಕಾವನ್ನು ಗೆದ್ದು ಮದೀನಾದತ್ತ ಬರುತ್ತಿದ್ದರು. ಅವರಿಗೆ ಆಯಾಸವಾಗಿತ್ತು. ದಣಿವಾರಿಸಿಕೊಳ್ಳಲು ಅಲ್ಲೇ ಇದ್ದ ಕೊಳದ ಬಳಿ ತಮ್ಮ ಕಾಲುಗಳನ್ನು ತೊಳೆದುಕೊಂಡು ವಿರಮಿಸಿಕೊಳ್ಳುತ್ತಿದ್ದರು. ಅದನ್ನು ನೋಡಿದ ಅವರ ಅನುಯಾಯಿಗಳು ಮಹಮದ್‌ರು ಕಾಲು ತೊಳೆದುಕೊಂಡ ನೀರನ್ನು ತೆಗೆದುಕೊಂಡು ಕೆಲವರು ತಮ್ಮ ತಲೆಯ ಮೇಲೆ ಹಾಕಿಕೊಂಡರು. ಮತ್ತೆ ಕೆಲವರು ಕುಡಿದರು. ಇದನ್ನು ನೋಡಿದ ಪೈಗಂಬರರಿಗೆ ಅನುಯಾಯಿಗಳ ವರ್ತನೆ ಸರಿಬರಲಿಲ್ಲ. ಕೂಡಲೇ ಅವರು 'ಏಕೆ ಹೀಗೆ ಮಾಡಿದಿರಿ?' ಎಂದು ಕೇಳಿದರು. ಅನುಯಾಯಿಗಳು, ನಿಮ್ಮ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ಆದ್ದರಿಂದ ಹೀಗೆ ಮಾಡಿದೆವು ಎಂದರಂತೆ! ಅದಕ್ಕೆ ಪೈಗಂಬರ್ ಅವರು ನನ್ನ ಮೇಲೆ ನಿಮಗೆ ಅಷ್ಟೊಂದು ಗೌರವವಿದ್ದರೆ, ನಾನು ಹೇಳಿರುವ ತತ್ತ್ವಗಳನ್ನು ಪಾಲಿಸಿರಿ ಎಂದರಂತೆ. ಈಗ ಆಗುತ್ತಿರುವುದು ಹೇಗೆಯೇ! ಧರ್ಮಾಂಧತೆ ಮತ್ತು ದ್ವೇಷದ ಮೂಲಕವೇ ನಮ್ಮನ್ನು ಆಳುತ್ತಿರುವ ರಾಜಕೀಯ ವ್ಯವಸ್ಥೆ ವಿಚಾರಹೀನರನ್ನೇ ತನ್ನ ಆಯುಧಗಳನ್ನಾಗಿ ಮಾಡಿಕೊಂಡು ಸಮಾಜವನ್ನು ವಿಭಜಿಸುತ್ತಿದೆ. ಇದಕ್ಕೆ ಹೆಗಲೆಣೆಯಾಗಿ ವಿದ್ಯಾರ್ಥಿಗಳಿಗೆ ಬೋಧಿಸುವವರು ಹೇಗಿದ್ದಾರೆಂದರೆ, 'ವಿಜ್ಞಾನದ ಪಾಠ ಹೇಳಿಕೊಡುವ ಅಧ್ಯಾಪಕನೆ ತನ್ನ ಸ್ವಂತ ಬದುಕಿನಲ್ಲಿ ರಾಹುಕಾಲ, ಪಂಚಾಂಗ, ವಾರಭವಿಷ್ಯ ಇತ್ಯಾದಿ ಮೂಢನಂಬಿಕೆಗಳಿಂದ ಮೂರು ಹೊತ್ತೂ ಮತ ಮೂರ್ಖನಾಗಿದ್ದರೆ, ವಿದ್ಯಾರ್ಥಿಗಳಿಗೆ ಹೇಗೆ ತಾನೆ ಸಿದ್ಧಿಸೀತು ವಿಚಾರದೃಷ್ಟಿ?'

'ಒಬ್ಬರು ಗೌರವಸ್ಥರು ದೇವಾಲಯಕ್ಕೆ ಹೋಗಿ ಬಂದುದಕ್ಕೆ ಪ್ರತಿಯಾಗಿ ಸಂಪ್ರೋಕ್ಷಣೆಗೆ ಜುಲಮಾನೆ ಕೊಡಬೇಕಾಗಿ ಬಂದಿತಂತೆ. ಕಾರಣ ಅವರು ಅಸ್ಪೃಶ್ಯರ ಜಾತಿಗೆ ಸೇರಿದವರಂತೆ. ಅವರಿಗಿಂತಲೂ ಮೂಢರೂ ಕೊಳಕರೂ ದುಷ್ಟರೂ ರೋಗಿಗಳೂ ದುರಾಚಾರಿಗಳೂ ಆದ 'ಸ್ಪೃಶ್ಯ'ರೆಂದನಿಸಿಕೊಂಡವರು ಗುಡಿಯೊಳಗೆ ಹೋದರೆ ಮೈಲಿಗೆಯಾಗುವುದಿಲ್ಲವಂತೆ! 'ಸ್ಪೃಶ್ಯ' ಯುವಕರು ತಮ್ಮ ಸಹೋದರನಿಗಾದ ಅವಮಾನ ತಮ್ಮದೆಂದು ಭಾವಿಸಿ ದೇವಾಲಯಗಳಿಗೆ ಹೋಗುವುದನ್ನೇ ಬಿಟ್ಟು ಪ್ರಕೃತಿ ಸೌಂದರ್ಯದಲ್ಲಿ, ಉದಯಿಸುವ ಸೂರ್ಯನಲ್ಲಿ, ಸಾಹಿತ್ಯದಲ್ಲಿ, ಸಂಸ್ಕೃತಿಯಲ್ಲಿ, ದರಿದ್ರನಾರಾಯಣರ ಸೇವೆಯಲ್ಲಿ ತಮ್ಮ ದೇವಾಲಯಗಳನ್ನು ಕಟ್ಟಿಕೊಂಡು, ಮತದ ಅನೌದಾರ್ಯವನ್ನು ಮುರಿಯಬೇಕು' (ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ).

'ಇಂತಹ ದಿವ್ಯ ದರ್ಶನದ ಪ್ರಾಪ್ತಿಗಾಗಿ ನಮಗೆ ಬೇಕಾಗುವ ಧೀರ, ಸ್ವತಂತ್ರ, ಉದಾರ ಪ್ರತಿಭಾ ಪೂರ್ಣವಾದ ಬುದ್ಧಿಯನ್ನೇ ನಾನು 'ನಿರಂಕುಶಮತಿ' ಎಂದು ಕರೆದಿದ್ದೇನೆ' ಎಂದು ಕುವೆಂಪು ಹೇಳಿರುವ ವೈಚಾರಿಕ ಸೌಂದರ್ಯವನ್ನು ನಮ್ಮ ಅಂತರಂಗದೊಳಕ್ಕೆ ಇಳಿಸಿಕೊಳ್ಳುವುದಕ್ಕೆ ವಿದ್ಯಾರ್ಥಿ ಸಮುದಾಯ ಮುಂದಾಗಬೇಕಿದೆ. ಕೇವಲ ಅಕ್ಷರ ಜ್ಞಾನವೇ ಶಿಕ್ಷಣವಲ್ಲ! ಮಾನವೀಯತೆಯ ನಡವಳಿಕೆಯೊಂದಿಗೆ ಬೆಸೆದುಕೊಂಡ ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನವಿಲ್ಲದ ಶಿಕ್ಷಣ ಅನಕ್ಷರತೆಗೆ ಸಮಾನ. ಅತ್ಯುತ್ತಮ ನಾಗರಿಕ ಸಮಾಜವು; ಅತ್ಯುತ್ತಮ ವೈಜ್ಞಾನಿಕ ದೃಷ್ಟಿ ಮತ್ತು ಮಾನವೀಯ ನಡವಳಿಕೆಯನ್ನು ಬೇಡುತ್ತದೆ. ಕುವೆಂಪು ಹೇಳಿದರು 'ಆತ್ಮಶ್ರೀ ಇಲ್ಲದ ವಿದ್ಯೆ ಶ್ರೀರಾಮನಿಲ್ಲದ ಅಯೋಧ್ಯೆ!'.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನಾವು ಏನಾದರೊಂದು ಸತ್ಯ ತಿಳಿಯಬೇಕಾದಲ್ಲಿ, ಅದರಿಂದ ನಮಗೆ ಉಪಯೋಗವಿದೆ ಎಂದು ನಂಬಬೇಕು. ಇಲ್ಲವಾದರೆ ಮನಸ್ಸು ಸಹಕಾರ ನೀಡುವುದಿಲ್ಲ.
  —ಜಾಕ್ ಬರ್ಡನ್
- ನಾವು ಎಲ್ಲವನ್ನೂ ಕಳೆದುಕೊಂಡ ನಂತರವೇ ನಮ್ಮ ಮನಸ್ಸಿಗೆ ಏನು ಬೇಕಾದರೂ ಮಾಡುವ ಧೈರ್ಯ ಬರುವುದು.
  —ಬ್ರಾಡ್ ಪಿಟ್ಟ್
- ಬಡವರೆಂದು ನೀವು ಯೋಚಿಸಬೇಡಿ. ಹಣವಲ್ಲ ಶಕ್ತಿ. ಒಳ್ಳೆಯತನ, ಪಾವಿತ್ರ್ಯ ಶಕ್ತಿ.
  —ಸ್ವಾಮಿ ವಿವೇಕಾನಂದ
- ಸತ್ಯವನ್ನು ನುಡಿ, ಧರ್ಮವನ್ನು ಆಚರಿಸು.
  —ಉಪನಿಷತ್ತು